

ಅರುಣ ಪಿ. ಭಟ್ಟ




## ವಾರಭವಿಷ್ಯ: 20.02.2025ರಿಂದ 26.02.2025ರವರೆಗೆ




ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತಮ ಪ್ರಗತಿ. ಆದಾಯ ಮೂಲದಿಂದ ಹೆಚ್ಚುವರಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ನೀವು ತೆಗೆದುಕೊಂಡಿದ್ದ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತೀರಿ. ಖರ್ಚು ವೆಚ್ಚಗಳು ಹೆಚ್ಚಾಗಿ ಚಿಂತೆಗೆ ಕಾರಣ ಆಗಲಿದೆ. ಶುಭದಿನ: 25. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕೌಟುಂಬಿಕ ವಿಚಾರಗಳಲ್ಲಿ ಉತ್ತಮವಾದ ಪ್ರಗತಿಯನ್ನು ಕಾಣಲಿದ್ದೀರಿ. ಮಾರಾಟ ವಿಭಾಗದಲ್ಲಿ ಕೆಲಸ ನಿರ್ವಹಿಸುವವರು ಗುರಿ ಮುಟ್ಟುವಲ್ಲಿ ಸಫಲರಾಗುತ್ತೀರಿ. ಬಂಡವಾಳ ಹೂಡಿಕೆಗೆ ಹಲವು ಅವಕಾಶಗಳನ್ನು ಪರಿಶೀಲಿಸಿ, ಅಂತಿಮವಾಗಿ ಅತ್ಯುತ್ತಮವಾದದ್ದನ್ನು ಆರಿಸಿಕೊಳ್ಳುವಲ್ಲಿ ಯಶಸ್ಸು ಪಡೆಯುತ್ತೀರಿ. ಮಕ್ಕಳಿಗೆ ಸಂಬಂಧ ಹುಡುಕುವಲ್ಲಿ ಯಶಸ್ಸು. ಶುಭದಿನ: 26. ಶ್ರೀ ಲಕ್ಷ್ಮೀ ನರಸಿಂಹಪಂಚರತ್ನ ಸ್ತೋತ್ರ ಪಠಿಸಿರಿ.





ನೀವು ನಂಬಿದ ವಿಚಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಬಹಳ ಶ್ರಮಪಡುತ್ತೀರಿ. ಸ್ನೇಹಿತರು ಸಾಲ ಕೇಳಿದರು ಎಂದು ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಬೇರೊಬ್ಬರು ನೀಡಿದ ವಸ್ತು ಕಳೆದುಕೊಳ್ಳುವ ಸಾಧ್ಯತೆ ಇದೆ. ವಾಹನ ಚಾಲನೆ ಮಾಡುವಾಗ ಎಚ್ಚರ. ಹತ್ತಿರದ ಸ್ಥಳಕ್ಕೆ ಪ್ರವಾಸ ಕೈಗೊಳ್ಳಲಿದ್ದೀರಿ. ಶುಭದಿನ: 22. ಗಣೇಶಪಂಚರತ್ನ ಸ್ತೋತ್ರ ಪಠಣ ಮಾಡಿರಿ.





ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಆದರೂ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದ್ದರೆ ಆ ಕಡೆ ಹೆಚ್ಚಿನ ಗಮನ ನೀಡಬೇಕು. ಶುಭದಿನ: 21. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಕೆಲಸದಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ತೃಪ್ತಿ ಮೂಡುತ್ತದೆ. ನಿಮ್ಮ ಮೇಲಧಿಕಾರಿ ನಿಮ್ಮ ಪರಿಣಾಮಕಾರಿಯಾದ ಕಾರ್ಯ ವೈಖರಿಯನ್ನು ಮೆಚ್ಚಿಕೊಳ್ಳುತ್ತಾರೆ. ಉದ್ಯೋಗದಲ್ಲಿ ಹೆಮ್ಮೆ ಪಡುವಂಥ ಸನ್ನಿವೇಶ ಇದಾಗಿರುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ: 24. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ಪುಣ್ಯಕ್ಷೇತ್ರ ದರ್ಶನಕ್ಕೆ ತೆರಳುವ ಸಾಧ್ಯತೆ. ಅಗತ್ಯಕ್ಕೆ ತಕ್ಕಂತೆ ಈ ವಾರ ಕೆಲ ನಿಯಮಗಳನ್ನು ಅಳವಡಿಸಿಕೊಳ್ಳಲಿದ್ದೀರಿ. ಮಾರುಕಟ್ಟೆಯ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಇದಕ್ಕಾಗಿ ನೀವು ಹೆಚ್ಚಿನ ಶ್ರಮವನ್ನು ಹಾಕಬೇಕಾಗುತ್ತದೆ. ಕೆಲವು ಕೆಲಸಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ನಿಮ್ಮ ಒಡಹುಟ್ಟಿದವರು ಸಹಾಯಕ್ಕೆ ನಿಲ್ಲುತ್ತಾರೆ. ಶುಭದಿನ: 22. ಆದಿತ್ಯ ಹೃದಯ ಪಠಿಸಿರಿ.





ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವ ಸಾಧ್ಯತೆ ಇದೆ. ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳಬೇಕಾದ ಅಗತ್ಯ ಕಂಡುಬರುತ್ತದೆ. ನಿಮ್ಮ ಸಂಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲವು ಸೂತ್ರಗಳನ್ನು ರೂಪಿಸಲಿದ್ದೀರಿ. ಶುಭದಿನ: 21. ಚಂಡಿ ಪಾರಾಯಣ ಮಾಡಿರಿ.





ವಾರದ ಮೊದಲ ಭಾಗದಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮುಗಿಸಿಕೊಳ್ಳಿ. ಉದ್ಯಮಿಗಳು ಗುಣಮಟ್ಟದ ನಿರ್ಧಾರದಿಂದ ಮೆಚ್ಚುಗೆಗೆ ಪಾತ್ರರಾಗುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಹೊಸ ಕೆಲಸಕ್ಕೆ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಹೆಚ್ಚಿಸಬೇಕು. ಶುಭದಿನ: 20. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.





ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ಕೆಲಸಗಳಿಗೆ ಪರಿಹಾರ ಸಿಗಲಿದೆ. ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಆಸ್ತಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಉದ್ವೇಗ ಇರುತ್ತದೆ. ಶುಭದಿನ: 26. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲಿ ವೃತ್ತಿಪರರಿಗೆ ಮುಖ್ಯವಾದ ಅವಕಾಶಗಳು ದೊರೆಯುತ್ತವೆ. ದೊಡ್ಡ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಆಸೆ ಪೂರೈಸುತ್ತದೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಸ್ಥಳಾಂತರ ಆಗುವ ಸಾಧ್ಯತೆಗಳಿವೆ. ಸಂಗಾತಿ ಜೊತೆಗೆ ಸಂತಸದ ಸಮಯ ಕಳೆಯಲಿದ್ದೀರಿ. ವೃತ್ತಿಪರ ಹಾಗೂ ಸಾಮಾಜಿಕ ಚಟುವಟಿಕೆಗಳ ಮಧ್ಯೆ ಗೊಂದಲ ಏರ್ಪಡಲಿದೆ. ಶುಭದಿನ: 24. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.




ಹಿರಿಯ ಅಧಿಕಾರಿಗಳ ಸಹಾಯದಿಂದ ನಿಮ್ಮ ಕೌಶಲ ಹೆಚ್ಚು ಮಾಡಿಕೊಳ್ಳುತ್ತೀರಿ. ವಾರದ ಆರಂಭದಲ್ಲಿ ಮಕ್ಕಳಿಂದ ನಿಮಗೆ ಶುಭ ಸುದ್ದಿ ಇದೆ. ಅವರಿಂದ ನೀವು ಹೆಮ್ಮೆ ಪಡುತ್ತೀರಿ. ವಿವಿಧ ಮೂಲಗಳಿಂದ ಸಂಪತ್ತು ಸಂಗ್ರಹ ಆಗುತ್ತದೆ. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರೀತಿಪಾತ್ರರಿಗೆ ಮತ್ತಷ್ಟು ಹತ್ತಿರವಾಗುತ್ತೀರಿ. ಶುಭದಿನ: 25. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.




ವೃತ್ತಿ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಡ್ತಿ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ವಾರದ ಮಧ್ಯ ಭಾಗದಲ್ಲಿ ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಶುಭದಿನ: 23. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ ಪಠಿಸಿರಿ.